# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.14/ಪಿಆರ್: 24 :2021-22 ದಿನಾಂಕ: 04.10.2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಬಾಗಲುಗುಂಟೆ ವಾರ್ಡ್ ನಂ.14 ರಲ್ಲಿ ದಿನಾಂಕ: **04.10.2021** ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಾಗಿದ್ದವರ ವಿವರಗಳು:-**

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಕೆ.ಮರುಳಸಿದ್ದಪ್ಪ | ಕಾರ್ಯಪಾಲಕ ಅಭಿಯಂತರರು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ವೆಂಕಟೇಶಪ್ಪ | ಸಹಾಯಕಯ ಅಭಿಯಂತರರು/ಸದಸ್ಯ ಕಾರ್ಯದರ್ಶಿ |
| 3 | ಶ್ರೀ. ಡಾ॥ ವರುಣ್ | ಕೋವಿಡ್ ಮೆಡಿಕಲ್ ಅಫೀಸರ್ ಬಾಗಲುಗುಂಟೆ, ಪ್ರಾಥಮಿಕ ಆರೋಗ್ಯ ಕೇಂದ್ರ. |
| 3 | ಶ್ರೀ. ಪಂಚಾಕ್ಷರಯ್ಯ | ಹೆಡ್ಡ್ ಕಾನ್ಸ್‌ಟೇಬಲ್, ಬಾಗಲುಗುಂಟೆ ಪೊಲೀಸ್ ಠಾಣೆ. |
| 4 | ಶ್ರೀ.ಮೋಹನ್ ಗೌರೋಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಮಂಜುನಾಥ್ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಾಗಲಗುಂಟೆ |
| 6 | ಶ್ರೀ.ರವಿಕುಮಾರ್ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಾಗಲಗುಂಟೆ |
| 7 | ಶ್ರೀ. ಬಿ.ಟಿ. ಲಕ್ಷ್ಮೀವೆಂಕಟೇಶ್ | ಮುನಿಕೊಂಡಪ್ಪ ಬಡಾವಣೆ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 8 | ಶ್ರೀ.ವೇಣುಗೋಪಾಲ್ | ನಾಗರೀಕ ಹಿತ ರಕ್ಷಣಾ ಸಮಿತಿ, |
| 9 | ಶ್ರೀ.ಕೃಷ್ಣಮೂರ್ತಿ | ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 10 | ಶ್ರೀ.ಸದಾಶಿವ | ನಾಗರೀಕ ಹಿತ ರಕ್ಷಣಾ ಸಮಿತಿ, ಎಂ.ಇ.ಐ ಬಡಾವಣೆ |
| 11 | ಶ್ರೀ.ಮೂಡಲಗಿರಿಯಪ್ಪ | ಅಧ್ಯಕ್ಷರು, ಸೌಂದರ್ಯನಗರ ಕ್ಷೇಮಾಭಿವೃದ್ಧಿ ಸಂಘ |
| 12 | ಶ್ರೀ.ಮುದ್ದಹನುಮೇಗೌಡ | ನಾಗರೀಕ ಹಿತ ರಕ್ಷಣಾ ಸಮಿತಿ ಸದಸ್ಯರು, ಸಿಡೇದಹಳ್ಳಿ |
| 13 | ಶ್ರೀ. ಗಿರೀಶ್. ಎಂ | ನಾಗರೀಕ ಹಿತ ರಕ್ಷಣಾ ಸಮಿತಿ ಸಿದ್ದೇಶ್ವರ ಬಡಾವಣೆ. |
| 14 | ಶ್ರೀ. ರಾಮೇಗೌಡ | ನಾಗರೀಕ ಹಿತ ರಕ್ಷಣಾ ಸಮಿತಿ ಭುವನೇಶ್ವರಿನಗರ. |
| 15 | ಶ್ರೀ. ಗುರುಪ್ರಸಾದ್ | ನಾಗರೀಕ ಹಿತ ರಕ್ಷಣಾ ಸಮಿತಿ ಭುವನೇಶ್ವರಿನಗರ. |
| 16 | ಶ್ರೀ. ರಾಮಪ್ರಸಾದ್ | ನಾಗರೀಕ ಹಿತ ರಕ್ಷಣಾ ಸಮಿತಿ ಸಿದ್ದೇಶ್ವರ್ ಬಡಾವಣೆ |



Scanned with CamScanner

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು, ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿ ಇರುವ ಕುಂದು ಕೊರತೆಗಳನ್ನು ಆದ್ಯತೆಯ ಮೇಲೆ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

- ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಪಟ್ಟ ವಿಷಯದ ಬಗ್ಗೆ

ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ವಾಲ್ವ್‌ಗಳನ್ನು ಅಸಮರ್ಪಕವಾಗಿ ಅಳವಡಿಸಿರುವುದರಿಂದ ಹಾಗೂ ಮ್ಯಾನ್ ಹೋಲ್ ಗಳನ್ನು ರಸ್ತೆಯ ಮೇಲ್ಮೈಯಿಂದ ಕೆಲವು ಕಡೆ ಎತ್ತರದಲ್ಲಿ ಹಾಗೂ ಕೆಲವು ಕಡೆ ರಸ್ತೆಯ ಮೇಲ್ಮೈಯಿಂದ ಕೆಳಗಡೆ ನಿರ್ಮಿಸಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿರುವ ಹಾಗೂ ಮಂಜುನಾಥನಗರದ ಕೆಲವು ರಸ್ತೆಗಳ ಎತ್ತರದಲ್ಲಿರುವ ಮನೆಗಳಿಗೆ ಸರಿಯಾಗಿ ನೀರು ಸರಬರಾಜು ಆಗದೇ ಇರುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ವಾರ್ಡ್ ಸಮಿತಿಯ ಗಮನಕ್ಕೆ ತಂದರು. ಈ ಕುರಿತು ಹಲವಾರು ಬಾರಿ ಸಂಬಂಧಪಟ್ಟವರ ಗಮನಕ್ಕೆ ತಂದಿದ್ದರು ಸಹ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿದರು ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಜವಾಬ್ದಾರಿಯುತ ಅಭಿಯಂತರರು/ ಆಧಿಕಾರಿಗಳು ಸಭೆಗಳಿಗೆ ಹಾಜರಾಗದಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಕೂಡಲೇ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಪ್ರತಿನಿಧಿಗಳಿಗೆ ಸೂಚಿಸಲಾಯಿತು ಹಾಗೂ ಜವಾಬ್ದಾರಿಯುತ ಅಭಿಯಂತರರು/ಅಧಿಕಾರಿಗಳು ಸಭೆಗೆ ಹಾಜರಾಗಲು ನಿರ್ದೇಶಿಸುವಂತೆ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಪತ್ರ ಬರೆಯಲು ತಿಳಿಸಲಾಯಿತು.

ಕ್ರಮ : ಸಹಾಯಕ ಅಭಿಯಂತರರು ವಾ–14 / ಸದಸ್ಯ ಕಾರ್ಯದರ್ಶಿ

- ಕೋವಿಡ್–19 ಸಾಂಕ್ರಾಮಿಕ ರೋಗದ ನಿಯಂತ್ರಣದ ಕುರಿತು

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಸಂಬಂಧಿಸಿದಂತೆ, ಹಿರಿಯ ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 7322 |
| ಬಿಡುಗಡೆಯಾದ ಪ್ರಕರಣಗಳು | 7174 |
| ಸಕ್ರಿಯ ಪ್ರಕರಣಗಳು | 09 |
| ಮರಣ | 139 ಇರುತ್ತದೆಂದು ಸಭೆಯಲ್ಲಿ ತಿಳಿಸಿದರು. |

ಕೋವಿಡ್ ಮೆಡಿಕಲ್ ಆಫೀಸರ್ ರವರು ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 58,250 ಜನರಿಗೆ ಲಸಿಕೆಯನ್ನು ಹಾಕಲಾಗಿರುತ್ತದೆ. ಈ ಪೈಕಿ 35,900 ಜನರಿಗೆ ಮೊದಲನೇಯ ಡೋಸ್ ಹಾಗೂ 17,740 ಜನರಿಗೆ ಎರಡನೇ ಡೋಸ್ ಲಸಿಕೆಯನ್ನು ಹಾಕಿರುವುದಾಗಿ ತಿಳಿಸಿದರು ಹಾಗೂ 750 ಮನೆಗಳಿಗೆ ಒಂದು ಬ್ಲಾಕ್ ಎಂದು ಪರಿಗಣಿಸಿ ವ್ಯಾಪಕವಾಗಿ ಲಸಿಕೆ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಸಭೆಗೆ ತಿಳಿಸಿದರು.

ಕ್ರಮ : ಕೋವಿಡ್ ಆರೋಗ್ಯ ವೈದ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು

- ಘನ ತ್ಯಾಜ್ಯ ನಿರ್ವಹಣೆ ಬಗ್ಗೆ

ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಅಸಮರ್ಪಕವಾಗಿರುವ ಬಗ್ಗೆ ವಾರ್ಡ್ ಸಮಿತಿ ಸಮಿತಿ ಸದಸ್ಯರು ತಮ್ಮ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಘನತ್ಯಾಜ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂಬಂಧಿಸಿದಂತೆ, ಕ್ರಮವಹಿಸುದಾಗಿ ಸಭೆಗೆ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಘ.ತ್ಯಾನಿ)/ಹಿರಿಯ/ ಕಿರಿಯ ಆರೋಗ್ಯ ನಿರೀಕ್ಷಕರು



Scanned with CamScanner

- **ಬೃಹತ್ ಮಳೆ ನೀರುಗಾಲುವೆ ಬಗ್ಗೆ**

ಬಾಗಲುಗುಂಟೆ ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ಮಳೆನೀರು ಗಾಲುವೆ ಕೈಗೊಂಡಿರುವ ಕಾಮಗಾರಿಗಳ ಕುರಿತು ಚರ್ಚಿಸಲಾಯಿತು. ವಾರ್ಡ್ ಸಮಿತಿ ಸದಸ್ಯರು ಬಾಗಲುಗುಂಟೆ ವ್ಯಾಪ್ತಿಯಲ್ಲಿನ ಮಳೆ ನೀರು ಚರಂಡಿಗಳಲ್ಲಿನ ಹೂಳನ್ನು ತೆಗೆಯಲು ಕ್ರಮವಹಿಸಬೇಕೆಂದು ಕೋರಿದರು. ಸಭೆಯಲ್ಲಿ ಈ ಕುರಿತು ವಿವರವಾಗಿ ಚರ್ಚಿಸಿ ನಗರದಲ್ಲಿ ಇತ್ತೀಚಿಗೆ ಭಾರಿ ಪ್ರಮಾಣದಲ್ಲಿ ಮಳೆ ಆಗುತ್ತಿದ್ದು, ಮಳೆಯಿಂದ ಉಂಟಾಗುವ ಅನಾಹುತಗಳನ್ನು ತಡೆಯಲು ಕೂಡಲೇ ಮಳೆ ನೀರು ಚರಂಡಿಯಲ್ಲಿನ ಹೂಳನ್ನು ತೆಗೆಯಲು ಕ್ರಮವಹಿಸುವುದರ ಬಗ್ಗೆ ಚರ್ಚಿಸಲಾಯಿತು.

ಕ್ರಮ: ಸ.ಅ/ಸ.ಕಾ.ನಿ.ಅ (ಬೃಹತ್ ಮಳೆ ನೀರುಗಾಲುವೆ)

- **ಇತರೆ ವಿಷಯಗಳ ಬಗ್ಗೆ.**

ಬಾಗಲುಗುಂಟೆ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳ ಬಗ್ಗೆ, ಅನಧಿಕೃತವಾಗಿ ರಸ್ತೆಯನ್ನು ಕತ್ತರಿಸಿರುವ ಬಗ್ಗೆ, ಪಾದಚಾರಿ ಮಾರ್ಗಗಳ ಒತ್ತುವರಿ ಬಗ್ಗೆ, ವಾರ್ಡ್ ವ್ಯಾಪ್ತಿಯಲ್ಲಿ ಹೂಳು ತುಂಬಿರುವ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಈ ಕುರಿತು ಪರಿಶೀಲಿಸಿ ಆದ್ಯತೆಯ ಮೇಲೆ ಕ್ರಮ ವಹಿಸುವುದರ ಬಗ್ಗೆ ತಿಳಿಸಲಾಯಿತು.

ಕ್ರಮ: ಸ.ಅ ವಾ–14/ಸ.ಕಾ.ನಿ.ಅ(ದಾಸರಹಳ್ಳಿ ಉಪವಿಭಾಗ)

04/10/2021

**ಸಹಾಯಕ ಅಭಿಯಂತರರು**
**ಹಾಗೂ ಸದಸ್ಯ ಕಾರ್ಯದರ್ಶಿ ವಾರ್ಡ್ ಸಮಿತಿ**

04/10/2021

**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14,**
**ಬಾಗಲಗುಂಟೆ**
**ಮತ್ತು ಕಾರ್ಯಪಾಲಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:-**

1) ಸನ್ಮಾನ್ಯ ಶ್ರೀ.ಆರ್.ಮಂಜುನಾಥ್ ರವರು, ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
3) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
4) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
5) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
12) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 14 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಕಲ್ಯಾಣಾಧಿಕಾರಿಗಳು (ದಾ.ವ) ಬಿಬಿಎಂಪಿ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
14) ಕಛೇರಿ ಪ್ರತಿ.

Scanned with CamScanner